**ದಿನಾಂಕ: 30.01.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ**

ಸ್ವಾತಿ ಸಾರಿ ಮಂದಿರ ಹೆಸರಿನಲ್ಲಿರುವ ಖಾತೆಗೆ ಸಂಬಂಧಿಸಿದ ದಿಃ 07.09.2024 ರಿಂದ 06.09.2025 ರವರೆಗಿನ ಕೆನರಾ ಬ್ಯಾಂಕ ಶಾಖೆ ಗೆಜ್ಜಹಳ್ಳಿಯ ಅಕೌಂಟ ಸ್ಟೇಟಮೆಂಟನ್ನು ನಿಡಿ-4 ಎಂದು ದೂರುದಾರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ.

ದಿಃ 30.01.2026 ರ ವಿಜಯ ಬೇಂದ್ರೆ ಅವರು ನೀಡಿದ ಪ್ರಮಾಣಪತ್ರವನ್ನು ನಿಡಿ-5 ಎಂದು ದೂರುದಾರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ.

ದಿಃ 28.03.2020 ರ ಸಿಂಡಿಕೇಟ ಬ್ಯಾಂಕ ಕೆನರಾ ಬ್ಯಾಂಕನಲ್ಲಿ ವೀಲಿನಗೊಂಡ ಬಗ್ಗೆ ಪ್ರೆಸ ರಿಲೀಸ್ ನೊಟಿಫಿಕೇಷನ ನ್ನು ನಿಡಿ-6 ಎಂದು ದೂರುದಾರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ.

**:ಪಾಟೀ ಸವಾಲು: ದೂರುದಾರ ಪರ ಶ್ರೀ ಜಿ ಎಚ್ ಬಿ ವಕೀಲರಿಂದ:**

ನಾನು 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ವ್ಯವಹಾರದ ಜ್ಞಾನ ಇದೆ ಎಂದರೆ ಸರಿ. ದೂರುದಾರರು ಈ ಪ್ರಕರಣ ದಾಖಲಿಸುವ ಮೊದಲು ನೀಡಿದ ನೋಟಿಸನ್ನು ನಾನು ಪಡೆದಿರುತ್ತೇನೆ. ಸದರಿ ನೋಟಿಸನಲ್ಲಿ ಬರೆದ ಸಂಗತಿಗಳನ್ನು ನಾನು ತಿಳಿದುಕೊಂಡೆ, ಸಾಕ್ಷಿ ಮುಂದುವರೆದು ಆನಂತರ ನಾನು ಸಿಂಡಿಕೇಟ ಬ್ಯಾಂಕ ಮ್ಯಾನೇಜರ ಹತ್ತಿರ ಹೋಗಿ ಭೇಟಿಯಾದೆನು. ಸದರಿ ಮ್ಯಾನೇಜರ್ ನಿಮ್ಮ ವಯಕ್ತಿಕ ಅಕೌಂಟ ನಮ್ಮ ಬ್ಯಾಂಕಿನಲ್ಲಿ ಇಲ್ಲ ಎಂದು ಹೇಳಿ ಕಳುಹಿಸಿದರು. ಸದರಿ ದೂರುದಾರ ನೀಡಿದ ನೋಟಿಸಿಗೆ ಪ್ರತ್ಯುತ್ತರ ನೀಡಲು ನನಗೆ ತೊಂದರೆ ಇರಲಿಲ್ಲ ಸಾಕ್ಷಿ ಮುಂದುವರೆದು ನಾನು ಕೆಲಸಕ್ಕೆ ಹೋದೆ ಎನ್ನುತ್ತಾರೆ.

2. ದೂರುದಾರ ಹಾಗೂ ನಾನು ಸಾಕಷ್ಟು ದಿನಗಳಿಂದ ಪರಿಚಯಸ್ಥರು ಎಂದರೆ ಸಾಕ್ಷಿ ದೂರುದಾರ ಆಗಾಗ ನಮ್ಮ ಅಂಗಡಿಗೆ ಬಂದು ನಮ್ಮ ಅಂಗಡಿ ಮಾಲೀಕರ ಜೊತೆ ಮಾತನಾಡಿಕೊಂಡು ಹೋಗುತ್ತಿದ್ದರು ಎನ್ನುತ್ತಾರೆ. ನಾನು ಕೃಷಿ ಭೂಮಿ ಹೊಂದಿರುತ್ತೇನೆ ಎಂದರೆ ಜಂಟಿಯಲ್ಲಿ ಹೊಂದಿರುತ್ತೇನೆ ಎನ್ನುತ್ತಾರೆ. ಸದರಿ ಜಮೀನುಗಳನ್ನು ದೂರುದಾರ ಲಾವಣಿ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ನಮ್ಮ ಜಮೀನುಗಳನ್ನು ದೂರುದಾರ ಲಾವಣಿ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದರಿಂದ ಆತ ಹಾಗೂ ನನ್ನ ಮಧ್ಯ 10-12 ವರ್ಷಗಳ ಪರಿಚಯ ಇದೆ ಎಂದರೆ ಸರಿಯಲ್ಲ. ಆದರೂ ಸಹ ಈಗ ಆತನು ನನಗೆ

ಪರಿಚಯಸ್ಥನಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದೂರುದಾರ ನಮ್ಮ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದರಿಂದ ಆತನಿಂದ ನಾನು ಆಗಾಗ ಸಾಲ ಪಡೆದು ಹಿಂದಿರುಗಿಸುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ದೂರುದಾರನ ಜೊತೆ ನಾನು ಹಣಕಾಸಿನ ವ್ಯವಹಾರ ಹೊಂದಿದ್ದರೂ ಸಹ ಹೊಂದಿರಲಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸ್ವಾತಿ ಸಾರಿ ಮಂದಿರ ಅಂಗಡಿಯಲ್ಲಿ ನಾನು ಸಹ ಕೆಲಸಕ್ಕೆ ಇದ್ದೆ ಎಂದರೆ ಸರಿ. ಸ್ವಾತಿ ಸಾರಿ ಮಂದಿರ ಪರಮೇಶ ತಿಪ್ಪಣ್ಣ ಸಿದ್ದೋಜಿ ರವರ ಹಾಗೂ ನನ್ನ ಪಾಲುದಾರಿಕೆಯಲ್ಲಿ ಇದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನು ಕೆಲಸಕ್ಕೆ ಮಾತ್ರ ಹೋಗುತ್ತಿದ್ದೆ ಎನ್ನುತ್ತಾರೆ. ಸದರಿ ಅಂಗಡಿಯನ್ನು ನಾನು ಹಾಗೂ ಪರಮೇಶ ತಿಪ್ಪಣ್ಣ ಸಿದ್ದೋಜಿ ರವರು ಪಾಲುದಾರಿಕೆಯಲ್ಲಿ ನಡೆಸುತ್ತಿದ್ದರಿಂದ ಸದರಿ ಅಂಗಡಿಯಲ್ಲಿ ನಾನು ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸ್ವಾತಿ ಸಾರಿ ಮಂದಿರ ವ್ಯಾಪಾರದ ಸಲುವಾಗಿ ನಾನು ದೂರುದಾರನಿಂದ ರೂ. 3,00,000/- ಸಾಲವನ್ನು ಪಡೆದಿದ್ದೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಅಗಸ್ಟ ತಿಂಗಳ 2022 ನೇ ಸಾಲಿನಲ್ಲಿ ದೂರುದಾರನ ಮನೆಗೆ ಹೋಗಿ ಪಡೆದಿದ್ದೆ ಎಂದರೆ ಸರಿಯಲ್ಲ. ಸದರಿ ಹಣವನ್ನು 2 ತಿಂಗಳು ಬಿಟ್ಟು ಕೊಡುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ.

4. ನಿಪಿ-1 ರಲ್ಲಿ ನಮೂದಿಸಿದ ಖಾತೆ ಸಂಖ್ಯೆ ಹಾಗೂ ನಿಡಿ-4 ರಲ್ಲಿ ನಮೂದಿಸಿದ ಖಾತೆ ಸಂಖ್ಯೆ ಒಂದೇ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಪಿ-1 ರಲ್ಲಿ ನಮೂದಿಸಿದ ಖಾತೆ ಸಂಖ್ಯೆ ಚಾಲ್ತಿಯಲ್ಲಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ, ನನ್ನ ವಕೀಲರಿಗೆ ಮಾಹಿತಿ ಇದೆ. ನಿಪಿ-1 ಚೆಕ್ ಸ್ವಾತಿ ಸಾರಿ ಮಂದಿರ ಅಂಗಡಿಗೆ ಸಂಬಂಧಿಸಿದ ಚೆಕ್ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಡಿ-4 ರಲ್ಲಿ ನಮೂದಿಸಿದ ಖಾತೆ ನನ್ನ ಹಾಗೂ ಪರಮೇಶ್ವರಪ್ಪ ಸಿದ್ದೋಜಿ ರವರ ಜಂಟಿ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಾನು ಹಾಗೂ ಪರಮೇಶ್ವರಪ್ಪ ಸಿದ್ದೋಜಿ ರವರು ಸದರಿ ಸ್ವಾತಿ ಸಾರಿ ಮಂದಿರಗೆ ಸಂಬಂಧಿಸಿದ ಖಾತೆಯನ್ನು ಜಂಟಿಯಾಗಿ ನಿರ್ವಹಿಸುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ.

5. ನನಗೆ ಸದರಿ ನಿಡಿ-4 ರಲ್ಲಿ ನಮೂದಿಸಿದ ಅಕೌಂಟ ಗೆ ಸಂಬಂಧಿಸಿದ 2021 ರಿಂದ 2024 ನೇ ಸಾಲಿನವರೆಗಿನ ಸ್ಟೇಟಮೆಂಟನ್ನು ಹಾಜರುಪಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಹಳೆಯ ಸ್ಟೇಟಮೆಂಟನ್ನು ಬ್ಯಾಂಕಿನವರು ನೀಡುವುದಿಲ್ಲ ಎನ್ನುತ್ತಾರೆ. ನಿಡಿ-4 ಸ್ಟೇಟಮೆಂಟನ್ನು ಬ್ಯಾಂಕಿನವರು ನೀಡಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಬ್ಯಾಂಕಿನವರೇ ನೀಡಿರುತ್ತಾರೆ ಎನ್ನುತ್ತಾರೆ. ಬ್ಯಾಂಕಿನವರು ಸಾಮಾನವಾಗಿ ಸ್ಟೇಟಮೆಂಟ ನೀಡಿದರೆ ಶೀಲು ಹಾಕಿ ಕೊಡುತ್ತಾರೆ ಎಂದರೆ ಸಾಕ್ಷಿ ಅವರು ನೀಡಿದ ಸ್ಟೇಟಮೆಂಟನ್ನು ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ಸ್ಟೇಟಮೆಂಟ ಪಡೆಯಲು ಅರ್ಜಿ ನೀಡಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಡಿ-4 ಸ್ಟೇಟಮೆಂಟನ್ನು

ನಾನು ಆನಲೈನ ಸೆಂಟರನಲ್ಲಿ ಪಡೆದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸ್ಟೇಟಮೆಂಟನ್ನು ನಾನು ಬ್ಯಾಂಕಿನಿಂದ ಪಡೆಯದೇ ಇದ್ದರೂ ಸಹ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಸದರಿ ನಿಪಿ-1 ಚೆಕ್ ದೂರುದಾರನ ಬಳಿ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಚೆಕ್ ನನ್ನದಲ್ಲ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ಸದರಿ ಚೆಕ್ ನನ್ನದಲ್ಲ ಎಂದು ದೂರುದಾರನಿಗೆ ನಾನು ನೋಟಿಸು ನೀಡಿಲ್ಲ. ಸದರಿ ನೋಟಿಸು ನೀಡಲು ನನಗೆ ತೊಂದರೆ ಇರಲಿಲ್ಲ. ದೂರುದಾರನಿಂದ ನಾನು 3 ಲಕ್ಷ ರೂಪಾಯಿ ಸಾಲ ಪಡೆದು ಅದನ್ನು ಮರಳಿಸಲು ದಿನಮೇಕ ಮಾಡುತ್ತಾ ಬಂದು ದಿಃ 12.06.2023 ಎಂದು ದಿನಾಂಕ ನಮೂದಿಸಿ ನಿಪಿ-1 ಚೆಕ್ಕನ್ನು 3 ಲಕ್ಷ ರೂಪಾಯಿಗಳಿಗೆ ದೂರುದಾರನಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಿಂಡಿಕೇಟ ಬ್ಯಾಂಕ ಕೆನರಾ ಬ್ಯಾಂಕ ಜೊತೆ ವೀಲಿನಗೊಂಡ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ದೂರುದಾರನಿಗೆ ಮೋಸ ಮಾಡುವ ಉದ್ದೇಶದಿಂದ ಸಿಂಡಿಕೇಟ ಬ್ಯಾಂಕಗೆ ಸಂಬಂಧಿಸಿದ ಚೆಕ್ಕನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

7. ದೂರುದಾರನಿಂದ ಪಡೆದ ಹಣವನ್ನು ಆತನಿಗೆ ಮರಳಿಸಬಾರದು ಎಂಬ ದುರುದ್ದೇಶದಿಂದ ಆತನಿಂದ ಹಣ ಪಡೆದಿಲ್ಲ ಆತನಿಗೆ ಚೆಕ್ ನೀಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರನಿಗೆ ಸದರಿ ಹಣವನ್ನು ನಾನು ನೀಡಲು ಬಾಧ್ಯಸ್ಥನಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ನಾನು ಹಾಗೂ ಸಿದ್ದೋಜಿ ರವರು ಸದರಿ ಸಾರಿ ಸೆಂಟರನ್ನು ಜಂಟಿಯಾಗಿ ನಡೆಸಿಕೊಂಡು ಬಂದು ಈಗ ಅಲ್ಲಿ ನಾನು ಕೆಲಸಕ್ಕೆ ಮಾತ್ರ ಹೋಗುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-
C/C 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್